**ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ**

ನಾನು ಯಾಕೆ ಕತೆ ಬರೆಯಲು ಪ್ರಾರಂಭಿಸಿದೆ ಅನ್ನುವುದು ನನಗೆ ಸರಿಯಾಗಿ ನೆನಪಿಲ್ಲ. ನಾನು ಬರಹಗಾರನಾಗಬೇಕು ಎನ್ನುವ ಬಯಕೆಯಿದ್ದದ್ದು ನಿಜವೇ. ಹೆಸರು ಮಾಡುವುದಕ್ಕೆ, ಕಾಲೇಜಿನ ದಿನಗಳಲ್ಲಿ ಮಿಕ್ಕವರಿಗಿಂತ ಭಿನ್ನವಾಗಿ ಕಾಣುವುದಕ್ಕೆ ನಮ್ಮಲ್ಲಿ ಹಲವರು ಹಲವು ಆಸಕ್ತಿಗಳನ್ನು ಆಯ್ದುಕೊಂಡಿದ್ದೆವು. ಕೆಲವರು ವಿದ್ಯಾರ್ಥಿ ನಾಯಕರಾದರು. ಕೆಲವರು ಚರ್ಚಾಪಟುಗಳಾದರು, ಕೆಲವರು ಆಟೋಟದಲ್ಲಿ ಮಿಂಚಿದರು, ಕೆಲವರು ನಾಟಕ ಕ್ಷೇತ್ರದಲ್ಲಿ ಹೆಸರು ಮಾಡಲು ಹೊರಟರು. ವೇದಿಕೆಯ ಮೇಲೆ ನಿಲ್ಲುವ ಧೈರ್ಯ ನನಗಿರಲಿಲ್ಲ. ಭಾಷಣ ಕುಟ್ಟುವ ಸಾಧ್ಯತೆಯಾಗಲೀ, ನಟನೆಯಾಗಲೀ, ಆಟೋಟವಾಗಲೀ ನನಗೆ ಅಗ್ಗೆ ಒಗ್ಗಿಬಂದಿರಲಿಲ್ಲ. ಆದರೆ ಬರವಣಿಗೆ ಸಾಧ್ಯ ಅನ್ನಿಸಿತ್ತು. ಹಾಗೂ ನನಗೆ ತುಸು ಹಾಸ್ಯಪ್ರಜ್ಞೆಯಿತ್ತು ಎನ್ನಿಸಿದ್ದರಿಂದ ನಾನು ಮೊದಲಿಗೆ ಪ್ರಯತ್ನಿಸಿ ಬರೆದದ್ದು ಹಾಸ್ಯ. ಅದೂ ಇಂಗ್ಲಿಷಿನಲ್ಲಿ. ನನ್ನ ಮೊದಲ ಪ್ರಕಟಿತ ಕೃತಿ 'ಡೆಕ್ಕನ್‌ಹೆರಾಲ್ಡ್' ಪತ್ರಿಕೆಯಲ್ಲಿ ಬಂದ ಮಿಡ್ಲ್ ಆಗಿತ್ತು. ಅದರ ನಂತರ ಬೇಗನೇ ಎರಡನೆಯ ಮಿಡ್ಲ್ ಕೂಡಾ ಅದೇ ಪತ್ರಿಕೆಯಲ್ಲಿ ಪ್ರಕಟವಾಯಿತು. ಹೀಗೆ ಪ್ರಾರಂಭವಾದ ನನ್ನ ಬರಹದ ಬದುಕಿನಲ್ಲಿ ನಾನು ಕನ್ನಡದಲ್ಲಿ ಬರೆಯುತ್ತೇನೆ, ಬರೆಯಬಲ್ಲೆ ಎನ್ನುವ ಮಾತಿರಲಿಲ್ಲ.

ಆದರೆ ನನ್ನ ಕಾಲೇಜು ದಿನಗಳಲ್ಲಿ ಸಿಕ್ಕ ಆಪ್ತ ಗೆಳೆಯ ಸಿ. ಸುರೇಶ, ಮತ್ತು ಬೆಂಗಳೂರಿನ ಎಂಇಎಸ್ ಕಾಲೇಜಿನ ಕನ್ನಡ ಮೇಷ್ಟರು ಮತ್ತು ಅಂದಿಗೆ ರಾಷ್ಟ್ರೀಯ ಸೇವಾ ಯೋಜನೆಯ ನಿರ್ವಾಹಕರೂ ಆಗಿದ್ದ ರಾಮ ರಾವ್ ಕುಲಕರ್ಣಿಯವರಿಂದಾಗಿ ನಾನು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದೆ. ನಾನು ಮತ್ತು ಸುರೇಶ ಜೋಡಿಯಾಗಿ ಕಾಲೇಜಿನ ಗೋಡೆಪತ್ರಿಕೆಗೆ ಹಾಸ್ಯ ಲೇಖನಗಳನ್ನು ಬರೆಯುತ್ತಿದ್ದೆವು. 'ಸುಧಾ'